ಓಎಸ್ ನಂ.15/23

ಪಿ.ಡಬ್ಲ್ಯೂ-1

ದಿನಾಂಕಃ 10-11-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**<u>ಪಾಟೀ ಸವಾಲುಃ 2 ನೇ ಪ್ರತಿವಾದಿ</u> ಪರ ಶ್ರೀ ವಿ.ವಿ.ಎಸ್ ವಕೀಲರಿಂದಃ**

1. 2 ನೇ ಪ್ರತಿವಾದಿ ಖರಿದಿ ಮಾಡಿದ ದಸ್ತಾವೇಜನ್ನು ನೀವು ನೋಡಿರುತ್ತೀರಾ ಎಂದರೆ ಹೌದು .ನಾನು ನೋಡಿರುತ್ತೇನೆ. ಅದರ ಮಜಕೂರುಗಳನ್ನು ಓದಿ ತಿಳಿದು ಕೊಂಡಿರುತ್ತೇನೆ. ಆ ಮಜಕೂರುಗಳಲ್ಲಿ ಕೆಡಿಸಿಸಿ ಬ್ಯಾಂಕಿನ ಸಾಲವನ್ನು ಮರು ಪಾವತಿ ಮಾಡಲು ಸದ್ರಿ ಆಸ್ತಿಯನ್ನು ಮಾರಾಟ ಕ್ಕೆ ಕೊಡಲಾಗುತ್ತಿದೆ ಎಂದು ಬರೆಯಲಾಗಿರುತ್ತದೆ ಎಂದರೆ ನಮಗೆ ಬೋಜಾ ಎಂದು ದಾಖಲೆ ಇರುವಾಗ ಅದು ಮಾರಾಟ ಮಾಡಿದ್ದೆ ತಪ್ಪು . ಸಾಕ್ಷಿ ಪುನಃ ಸದ್ರಿ ಕ್ರಯ ಪತ್ರದಲ್ಲಿ ಕೆಡಿಸಿಸಿ ಬ್ಯಾಂಕಿನ ಸಾಲವನ್ನು ಮರು ಪಾಾವತಿ ಮಾಡಲು ಸದ್ರಿ ಆಸ್ತಿಯನ್ನು ಮಾರಾಟ ಕೊಡಲಾಗುತ್ತಿದೆ ಎಂದು ಬರೆಯಲಾಗಿದೆ ಎಂದರೆ ತಪ್ಪು . ಸದ್ರಿ ಕ್ರಯ ಪತ್ರ ತೋರಿಸಿದರೆ ನೀವು ಓದ ಬಹುದು ಎಂದು ಸಾಕ್ಷಿಗೆ ನಿಪಿ-9 ನ್ನು ತೋರಿಸಲಾಗಿದ್ದು , ಸಾಕ್ಷಿ ಅದನ್ನು ಓದಿ ನೋಡಿ ದ್ದು ಬ್ಯಾಂಕಿನ ಗಮನಕ್ಕೆ ಬಾರದಂತೆ ಸದ್ರಿ ಕ್ರಯ ಪತ್ರವನ್ನು ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ . ನಿಪಿ-9 ರಲ್ಲಿ ರಿಟ್ ಪಿಟೆಷನ್ ನಂ 106755/2018 ಎಂದು ನಮೂದು ಅಗಿರುತ್ತದೆ ಎಂದರೆ ಸರಿ . ಸದ್ರಿ ರಿಟ್ ಪಿಟೆಷನ್ ನಲ್ಲಿ ಏನೆಲ್ಲಾ ನಮೂದು ಅಗಿತ್ತು ಎಂದರೆ ನಮ್ಮ ಬ್ಯಾಂಕಿನ ಸಾಲಕ್ಕೆ ಬೋಜಾ ಇದ್ದ ಚಿರಾಸ್ತಿಯನ್ನು ನಾವು ಓಕ್ಷನ ಗೆ ತೆಗೆದಾಗ ಈ ಸ್ಥಿರಾಸ್ತಿಯನ್ನು ಮಾರಾಟ ಮಾಡಿದ ಬಗ್ಗೆ ನಮಗೆ ಗೊತ್ತಿಲ್ಲ . ನಂತರ ದಲ್ಲಿ ಗೊತ್ತಾಗಿರುತ್ತದೆ . ಅದರ ನಂತರದಲ್ಲಿ ನಾವು ಈ ಮೂರು ಸ್ಥಿರಾಸ್ತಿಗಳ ಮೇಲೆ ಪ್ರಕರಣ ದಾಖಲು ಮಾಡಿರುತ್ತೇವೆ . ಇದು ಸಿವಿಲ್ ಪ್ರಕರಣ ಯಕೆಂದರೆ ಅವರು ನಮ್ಮ ಮೆಂಬರ ಶಿಪ ಪಡೆದಂತಹ ವ್ಯಕ್ತಿ ಅಲ್ಲ . ಸಾಕ್ಷಿಗೆ ಪುನಃ ರಿಟ್ ಪಿಟೆಷನ ಯಾರು ಯಾಕೆ ಹಾಕಿದ್ದು ಎಂದರೆ ಸದ್ರಿ ರಿಟ್ ಪಿಟೆಷನ್

ವಿನಾಯಕ ಜಟ್ಟಿ ನಾಯಕ ರವರು  ಕೆಡಿಸಿಸಿ ಬ್ಯಾಂಕಿನ ವಿರುದ್ದ ಹಾಕಿರುತ್ತಾರೆ .  ಅವರು ಆ ರಿಟ್ ಪಿಟಿಷನ್ ವನ್ನು ಆ ಸ್ದಿರಾಸ್ತಿಯನ್ನು ಉಳಿಸಿಕೊಳ್ಳುವಕೋಸ್ಕರ ಹಾಕಿರುತ್ತಾರೆ .  ಈ ಪ್ರಕರಣ  ಮಾನ್ಯ ಹೈಕೊರ್ಟ ಮುಂದೆ ಪೆಂಡಿಗ್ ಇರುತ್ತದೆ . ಮಾನ್ಯ ಹೈ ಕೊರ್ಟ ಮುಂದೆ ಪೆಡಿಂಗ ಇದ್ದಾಗ  ಆಸ್ತಿಯನ್ನು ಮಾರಾಟ ಮಾಡಲಾಗಿರುತ್ತದೆ  ಎಂದು  ಮಾನ್ಯ ಹೈ ಕೊರ್ಟ ನವರ ಗಮನಕ್ಕೆ ತಂದಿರುತ್ತೀರಾ ಎಂದರೆ ಹೌದು .  ಮಾನ್ಯ ಹೈ ಕೊರ್ಟ ನಲ್ಲಿ ಇದೇ ದಾವಾಸ್ತಿಗೆ ಸಂಬಂಧಿಸಿದಂತೆ ಪ್ರಕರಣ ಬಾಕಿ ಇರುತ್ತದೆ ಎಂದು ಈ ದಾವೆಯಲ್ಲಾಗಲಿ ನಿಮ್ಮ ಪ್ರಮಾಣ ಪತ್ರದಲ್ಲಾಗಲಿ , ವಾದ ಪತ್ರದಲ್ಲಾಗಲಿ ಬರೆಸಿರುವುದಿಲ್ಲ ಎಂದರೆ  ಹೌದು ಕಾಣಿಸಿರುತ್ತೇನೆ .  ಈ ದಾವೆ ದಾಖಲು ಅಗುವ ಪೂರ್ವದಲ್ಲಿ ನಾನು ಮಾನ್ಯ ಉಚ್ಚ  ನ್ಯಾಯಾಲಯದ ಮುಂದೆ ಹಾಜರಾಗಿರುತ್ತೇನೆ . ಸಾಕ್ಷಿ ವಾದ ಪತ್ರವನ್ನು ಕೈಯಲ್ಲಿ ಕೊಡಲಾಗಿದ್ದು ಸದ್ರಿ ವಾದ ಪತ್ರದಲ್ಲಿ ಎಲ್ಲಿ ನೀವು ಮಾನ್ಯ ಉಚ್ಚ ನ್ಯಾಯಾಲಯದ ಮುಂದೆ ಪ್ರಕರಣ ಈ ಆಸ್ತಿಗೆ ಸಂಬಂಧಿಸಿದಂತೆ  ದಾಖಲು ಆಗಿರುತ್ತದೆ ಎಂದು ಎಲ್ಲಿ ಬರೆಸಿರುತ್ತೀರಿ ಎಂದು ಕೇಳಿದಾಗ ಸಾಕ್ಷಿ  ವಾದ ಪತ್ರ ಹಿಡಿದು ಕೊಂಡು  ನೋಡಿ  ಇಲ್ಲ ಎಂದು ನುಡಿಯುತ್ತಾರೆ .  ಮಾನ್ಯ ಉಚ್ಚ ನ್ಯಾಯಾಲಯುದ ಮುಂದೆ ಇರುವ ರಿಟ್ ಪಿಟಿಷನ್ ಈ ದಾವಾಸ್ತಿಗೆ ಸಂಬಂಧಿಸಿದಂತೆ ಇರುತ್ತದೆ ಎಂದರೆ ಸರಿ .  ಈ ದಾವಾಸ್ತಿಗೆ ಸಂಬಂಧಿಸಿದಂತೆ ಯಾವಾಗ ಅವಾರ್ಡ ಆಗಿರುತ್ತದೆ ಎಂದರೆ  ಅದರ ಬಗ್ಗೆ ದಾಖಾಲತಿ ಕೊಟ್ಟಿರುತ್ತೇನೆ. ದಿನಾಂಕ  ನನಗೆ ಈಗ ನೆನಪಿಗೆ ಬರುತ್ತಿಲ್ಲ . ಅವಾರ್ಡ ಅದ ತಕ್ಷಣ ಅಸ್ತಿಗಳ ಹರಾಜು ಹಾಕಲು ತೊಂದರೆ ಇರಲಿಲ್ಲ ಎಂದರೆ ಸರಿ . ಈ ಓಕ್ಷನ ಮಾಡಿ  ಹಣವನ್ನು ಪಡೆದುಕೊಳ್ಳುವ ಕ್ರಮವನ್ನು ನೀವು ಕೈಗೊಂಡಿಲ್ಲ ಎಂದರೆ ಕ್ರಮ ಕೈಗೊಂಡಿರುತ್ತೇವೆ . ಅವರು ಅದರಲ್ಲಿ ಬಂದ ಹಣವನ್ನು ಸ್ವಲ್ಪ ತುಂಬಿದ್ದು ಪುನಃ ಮರು ಪಾಾವತಿಗಾಗಿ ಸ್ವಲ್ಪ ಕಾಲಾವಕಾಶ ಕೇಳಿದ್ದು ಅದರಂತೆ ಕಾಲಾವಕಾಶ ಕೊಟ್ಟದ್ದು ಇರುತ್ತದೆ .  ಅವರು ಕಾಲಾವಕಾಶ ಬೇಕು ಎಂದು ಬರವಣಿಗೆಯಲ್ಲಿ ಕೊಟ್ಟದ್ದು ಇರುತ್ತದೆ ಅದನ್ನು

ನ್ಯಾಯಾಲಯದ ಮುಂದೆ ಹಾಜರ ಪಡಿಸಿದ ಬಗ್ಗೆ ನನಗೆ ಗೊತ್ತಿಲ್ಲ. ಬೋಜಾ ದಾಖಲಿಸುವ ಸಮಯದಲ್ಲಿ ತಿದ್ದುಪಡಿ ದಸ್ತು ಮಾಡುವ ಪೂರ್ವದಲ್ಲಿ ಏನು ತಪ್ಪು ಆಗಿತ್ತು ಎಂದರೆ ಶೇಡಗೇರಿ ಗ್ರಾಮ ದಲ್ಲಿ NA ಲ್ಯಾಂಡ 7/18 , 7/16 ಬ , ಎರಡು NA ಲ್ಯಾಂಡ ಸ್ಥಿರಾಸ್ತಿಗಳು ಎಂದು ನಮೂದು ಆಗಿತ್ತು . ಶೇಡಗೇರಿ ಗ್ರಾಮದ ಈ ಎರಡು ಆಸ್ತಿಗಳಲ್ಲಿ ಕಟ್ಟಡ ಇರುತ್ತದೆ . Deposit of title deed ಮಾಡುವಾಗ ಆ ಆಸ್ತಿಯಲ್ಲಿ ಕಟ್ಟಡ ಇತ್ತು ಎಂದರೆ ಕಟ್ಟಡ ಇತ್ತು . ಸಾಕ್ಷಿ ಪುನಃ ಆ ಕಟ್ಟಡವನ್ನು ಕಟ್ಟಲು ನಾವು ಸಾಲ ಕೊಟ್ಟಿರುತ್ತೇವೆ . ಆ ಸಾಲವನ್ನು ದಿಃ 19-3-2015 ರಂದು ಕೊಟ್ಟಿರುತ್ತೇವೆ . ಯಾವುದೇ ಒಂದು ಸಾಲವನ್ನು ಕಟ್ಟಡ ಕಟ್ಟಲು ಕೊಡಬೇಕಾದರೆ ಆ ಲ್ಯಾಂಡ್ NA ಆಗಿರಬೇಕು ಎಂದರೆ ಸರಿ . ಈ deposit of title deed ದಲ್ಲಿ ಭೂಮಿ NA ಲ್ಯಾಂಡ ಎಂದು ನೀವು ನಮೂದು ಮಾಡಿಲ್ಲ ಎಂದರೆ ಸರಿ .

( ಈ ಹಂತದಲ್ಲಿ 2 ನೇ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಯಿತು .)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.